**ಸಿ.ಸಿ. 1729/2020**
**ಪಿ.ಡಬ್ಲೂಃ 01**

ದಿನಾಂಕಃ **05-04-2024** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು **:-** ಆರೋಪಿ ಪರ ವಕೀಲರರಿಂದ **:-**

ಆರೋಪಿ ನನಗೆ ಸುಮಾರು 10-12 ವರ್ಷಗಳಿಂದ ಗೊತ್ತು. ಆರೋಪಿ ಗಡ್ಡೆಕಟ್ಟೆ ಗ್ರಾಮದ ವಾಸಿ. ನಾನು ವಾಸವಾಗಿರುವ ಗ್ರಾಮ ಚೀಲೂರು ಮತ್ತು ಆರೋಪಿ ವಾಸವಾಗಿರುವ ಗಡ್ಡೆಕಟ್ಟೆ ಗ್ರಾಮ ಅಕ್ಕಪಕ್ಕದ ಗ್ರಾಮಗಳು. ಆರೋಪಿಯು ವ್ಯವಸಾಯ ಕೆಲಸವನ್ನು ಮಾಡುತ್ತಿದ್ದಾರೆ. ದಿಃ 02-09-2020 ರಂದು ಆರೋಪಿಯು ನನ್ನ ಮನೆಗೆ ಬಂದು ರೂ 1,80,000/- ಸಾಲವನ್ನು ಕೇಳಿದನು. ಆ ಸಮಯದಲ್ಲಿ ಆರೋಪಿ ಒಬ್ಬನೇ ಬಂದಿದ್ದನು. ಆ ಸಮಯದಲ್ಲಿ ಮನೆಯಲ್ಲಿ ನಾನು ಸಹ ಒಬ್ಬನೇ ಇದ್ದೇನು. ಆರೋಪಿಯು ನನ್ನ ಹತ್ತಿರ ಹಣ ಕೇಳಲು ಬಂದಾಗ ಕೊರೋನಾ ಕಾಯಿಲೆಯಿಂದ ಜನರು ಬಳಲುತ್ತಿದ್ದರು. ಆ ಸಮಯದಲ್ಲಿ ಲಾಕ್ ಡೌನ್ ಜಾರಿಯಲ್ಲಿ ಇರಲಿಲ್ಲ. ಆರೋಪಿಯು ನನ್ನನ್ನು ಹಣ ಕೇಳಲು ಬಂದ ಸಮಯದಲ್ಲಿ ಲಾಕ್ ಡೌನ್ ಜಾರಿಯಲ್ಲಿ ಇದ್ದು ಮತ್ತು ಬೆಳಗ್ಗೆ 6 ರಿಂದ 10.00 ಗಂಟೆ ಸಮಯದವರೆಗೂ ಅಂಗಡಿ ಮುಗ್ಗಟ್ಟುಗಳು ತೆರೆದಿರುತ್ತದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಬೆಳಗ್ಗೆ 10.00 ರಿಂದ ಮಾರನೇ ದಿನ ಬೆಳಗ್ಗೆ 6.00 ಗಂಟೆಯ ವರೆಗೂ ಎಲ್ಲಾ ಅಂಗಡಿಗಳು ಮುಚ್ಚುತ್ತಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ವಾಹನದ ಸಂಚಾರ ಮತ್ತು ಜನಗಳ ಸಂಚಾರ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನನ್ನು ಹಣವನ್ನು ಕೇಳಲು ಬೆಳಗ್ಗೆ 7.30 ಗಂಟೆ ಸಮಯಕ್ಕೆ ಬಂದಿದ್ದರು. ಆರೋಪಿ ನನ್ನನ್ನು ಹಣ ಕೇಳಲು ಬಂದಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನಿಂದ ರೂ 1,80,000/- ಗಳನ್ನು ಸಾಲವಾಗಿ ಪಡೆದುಕೊಂಡಿಲ್ಲ ಮತ್ತು ಸದರಿ ಹಣವನ್ನು 2 ತಿಂಗಳ ಒಳಗೆ ಮರುಪಾವತಿ ಮಾಡುತ್ತೇನೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ನಾನು ದಿಃ 02-11-2020 ರಂದು ಹಣವನ್ನು ಮರುಪಾವತಿ ಮಾಡುವಂತೆ ಕೇಳಿಲ್ಲ ಎಂದರೆ ಸರಿಯಲ್ಲ. ಆರೋಪಿಯು ದಿಃ 02-12-2020 ನಮೂದು ಮಾಡಿ ನಿಪಿ-1 ಚೆಕ್ ನ್ನು ನನಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.